Language Code : **07**

इस पुस्तिका में **20** मुद्रित पृष्ठ हैं।
This booklet contains **20** Printed pages.

# SAS-24-II

**प्रश्न-पत्र-II / PAPER-II**
**कन्नड़ भाषा परिशिष्ट**
**Kannada Language Supplement**
**भाग-IV & V / PART-IV & V**

मुख्य परीक्षा पुस्तिका संख्या / Main Test Booklet No.

मुख्य परीक्षा पुस्तिका कोड / Main Test Booklet Code
**O**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **O**। यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/ marking responses in the Answer Sheet.
5. The CODE for this Language Booklet is **O**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language-I (Kannada) (Q. 91 to Q. 120)
   Part-V : Language-II (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) / Roll Number : in figures ____________________
: शब्दों में / in words ____________________
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________________ निरीक्षक के हस्ताक्षर : ____________________
Candidate's Signature : Invigilator's Signature :
Facsimile Signature Stamp of
Centre Superintendent : ____________________

Language Code : **07**

# SAS-24-II

ಪ್ರಶ್ನೆ ಪುಸ್ತಿಕೆ ಸಂಕೇತ

**O**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

**ಪ್ರಶ್ನೆ ಪತ್ರಿಕೆ–II**

**ಕನ್ನಡ ಭಾಷಾ ಪೂರಕ**

**ಭಾಗ IV ಮತ್ತು V**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ.**
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ O** ಆಗಿದೆ. ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.
   ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ______________________

: (ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ______________________

ಪರೀಕ್ಷಾರ್ಥಿಯ ಸಹಿ : ______________ ನಿರೀಕ್ಷಕರ ಸಹಿ : ______________

Facsimile signature stamp of
Centre Superintendent : ______________________

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 91 - 120)** ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

## PART–IV

## LANGUAGE–I

## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 91 - 120)** ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91–99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ವಾಡೆಯ ಬಲಬದಿಗೆ ಹೊಂದಿಯೇ ಪಡದಯ್ಯನವರ ಮಠವಿತ್ತು. ಪುರಾತನವಾದ ಈ ಮಠದ ಕಟ್ಟಡ ಪಾದಳ್ಳಿಯ ಯೋಗ್ಯತೆಯನ್ನೂ ಮೀರಿ ಭವ್ಯವಾಗಿತ್ತು. ಮಹಾದ್ವಾರವನ್ನು ದಾಟಿದೊಡನೆಯೇ ವಿಶಾಲವಾದ ಅಂಗಳ, ಎದುರಿಗೆ ಅಚ್ಚ ಕರಿಯ ಕಲ್ಲಿನಿಂದ ಕಟ್ಟಿದ ಕಂಬಗಳುಳ್ಳ ರಂಗಮಂಟಪ; ಎರಡೂ ಬದಿಗೆ ಭಕ್ತರಿಗೆ ಇರಲು ವಸತಿಗಳು; ರಂಗಮಂಟಪದ ಹಿಂದೆ ಅಡಿಗೆಮನೆ ಹಾಗೂ ಸ್ವಾಮಿಗಳ ಧ್ಯಾನಮಂದಿರ ಇವನ್ನೆಲ್ಲ ನೋಡಬಹುದಾಗಿತ್ತು. ಬಾಪೂಸಾಹೇಬ ಮಠಕ್ಕೆ ಹೋದಾಗ ಪಡದಯ್ಯನವರು ಒಳಗಿನ ಕೋಣೆಯಲ್ಲಿಯೇ ಮಧ್ಯಾಹ್ನದ ಬೇಸರದಿಂದ ಅಡ್ಡಾಗಿದ್ದರು. ಕೇವೆ ಬಣ್ಣದ ಕಪನಿ ಧರಿಸಿದ ಹುಡುಗನೊಬ್ಬ ಅವರ ಪಾದಸೇವೆಯಲ್ಲಿ ನಿರತನಾಗಿದ್ದ. ಬಾಪೂಸಾಹೇಬನನ್ನು ನೋಡಿದೊಡನೆ ಪಡದಯ್ಯನವರು ಜೋರಾಗಿ ನಗುತ್ತ, "ಓಹೋ ಜಾಗೀರದಾರರ ಸವಾರಿ ದಾರಿ ತಪ್ಪಿ ಬಂದೈತಲ್ಲ" ಎಂದು ನಗೆಯಾಡಿದರು. ಬಾಪೂಸಾಹೇಬ ಏನೋ ಪೇಚಿನಲ್ಲಿ ಸಿಕ್ಕವರಂತೆ ಮುಖ ಮಾಡುತ್ತ "ಹೌದು ಬುದ್ದೀ, ದಾರಿ ಕೇಳಲಿಕ್ಕೇ ನಿಮ್ಮ ಹತ್ತಿರ ಬಂದದ್ದು" ಎಂದು ಉತ್ತರವಿತ್ತು, ತೂಕಡಿಸುತ್ತ ಕಾಲೊತ್ತುತ್ತ ಕುಳಿತ ಹುಡುಗನತ್ತ ದೃಷ್ಟಿ ಬೀರಿದ. ಪಡದಯ್ಯನವರು ಅದರರ್ಥವನ್ನು ಗ್ರಹಿಸಿಕೊಂಡು "ಲೇ ಗುರುಪಾದಾ, ಆ ಗಾಂಜಿಬಡಕ ಕೆಂಚಗ ನಾ ಒಂದು ಕೆಲಸ ಹೇಳಿದ್ದೆ. ಮಾಡ್ಯಾನ ಏನ ಕೇಳಿ ಬಾರಲೇ" ಎಂದು ಆಜ್ಞಾಪಿಸಿದರು. ಗುರುಪಾದನೂ ಅಷ್ಟೇ ಸಾಕೆಂದು ಹೊರಗೋಡಿದ.

ಬಹಳ ಹೊತ್ತು ಇಬ್ಬರಲ್ಲಿಯೂ ವಿಚಾರ ವಿನಿಮಯ ನಡೆಯಬೇಕು, ಪಡದಯ್ಯನವರು ಅಂತರಂಗದ ಕೋಣೆಯಿಂದ ಹೊರಗೆ ಬಂದಾಗ ಬಾಪೂಸಾಹೇಬನ ಮುಖ ಅರಳಿತ್ತು. "ಸ್ವಾಮೇರ, ನಿಮ್ಮ ಶಾಣೇತನಕ್ಕೆ ಬೇಲಿನ ಇಲ್ಲ ನೋಡ್ರಿ. ನಾನೂ ಮೂರು ತಾಸು ತಲೆ ಕೆಡಿಸಿಕೊಂಡೆ. ಅದರ ಇಷ್ಟ ಹಗರಾಗಿ ಕೆಲಸಾ ಮಾಡಿಕೊಳ್ಳೋ ಹಂಚಿಗಿ ಹೊಳದಿದ್ದಿಲ್ಲ" ಎಂದು ಹೊಗಳಿ ಪಡದಯ್ಯನವರಿಗೆ ಧನ್ಯವಾದಗಳನ್ನರ್ಪಿಸಿದ.

ಪಡದಯ್ಯನವರು ಅವನ ಸಮೀಪಕ್ಕೆ ಬಂದು, "ಜಾಗೀರದಾರಸಾಹೇಬ, ವಿಷಯ ನಾಜೂಕ ಐತಿ, ಒಂದು ಮಾತ ಹೇಳಿರತೀನಿ, ಆ ದಾದಾಗ ಈ ಸುದ್ದಿ ತಿಳಿದರ ಒಂದು ಹೋಗಿ ಒಂದಾದೀತು. ನೀವು ನನ್ನ ಮ್ಯಾಗ ವಿಶ್ವಾಸ ಇಡರಿ. ನಮ್ಮ ದಾನಿ ನಿಮ್ಮನ್ನು ನಾಳೆ ಕರ್ರ್ಯಾಕ ಬಂದ ಕೂಡಲೇ ನೀವು ಮಠಕ್ಕೆ ಬರ್ರಿ. ಕಾರಹುಣ್ಣಿಮಿ ವಾಡೆದ ಎತ್ತಿನ ಮೆರವಣಿಗಿ ನೋಡಾಕ ಊರ ಜನಾ ಎಲ್ಲ ಅಗಸಿ ಮುಂದ ನೆರದಿರತಾರ. ಆಗ ನಮ್ಮ ದಾನಿ ಚಿಮಣಾನ್ನೂ ಮಠಕ್ಕೆ ಕರಕೊಂಡ ಬರತಾಳ. ನೀವು ಎತ್ತಿನ ಮೆರವಣಿಗೆ ಮುಗಸೂತನಾ, ಆಕಿ ಚಿಮಣಾನ ಮನಸ್ಸು ಒಲಿಸಿರತಾಳ. ಆಕಿ ಬಂದು ನಿಮ್ಮನ್ನು ಕರದಾಗ ನೀವು ಬಿಟ್ಟ ಕೆಲಸಾ ಬಿಟ್ಟು ಬರಬೇಕು ಆತು" ಎಂದು ಉಪಾಯ ಹೇಳಿ ಬೀಳ್ಕೊಟ್ಟರು.

ಮರುದಿನ ಮಧ್ಯಾಹ್ನಕ್ಕೆ ಕಾರಹುಣ್ಣಿಮೆಯ ವೈಭವದಲ್ಲಿ ಊರಿಗೂರೇ ದಂಗಾಗಿತ್ತು. ವಾಡೆಯ ಎತ್ತುಗಳ ಮೆರವಣಿಗೆ ಅಗಸೆಯ ಮುಂದೆ ಬಂದಾಗ ಆಗಲೇ ಎರಡು ಗಂಟೆಯಾಗಿತ್ತು. ಊರಿಗೂರೇ ನೆರೆದು ಮೆರವಣಿಗೆಯ ಉತ್ಸಾಹದಲ್ಲಿ ಮುಳುಗಿಹೋಗಿತ್ತು. ಜಾಗೀರದಾರರ ಎತ್ತುಗಳ ಹಿಂದಿನಿಂದಲೇ ಗೌಡರ ಎತ್ತುಗಳ ಮೆರವಣಿಗೆ ಅದಕ್ಕೂ ಹೆಚ್ಚಿನ ಸಡಗರದಿಂದ ನಡೆದಿತ್ತು. ಹಾಗೆಯೇ ಒಂದರ ಹಿಂದೊಂದು ಮೆರವಣಿಗೆ ಸಂಜೆಯವರೆಗೆ ಅಗಸೆಗೆ ಬರುವುದು ವಾಡಿಕೆಯಾಗಿತ್ತು. ಮಧ್ಯಾಹ್ನವೇ ಬಂದು ಕುಳಿತ ಹೆಣ್ಣುಮಕ್ಕಳೆಲ್ಲ, ದೀಪ ಹಚ್ಚುವ ಹೊತ್ತಿಗೆ ಕರಿಹರಿಯುವುದನ್ನು ನೋಡಿಕೊಂಡು ಹೋಗಬೇಕು. ಯಾರಿಗೂ ಮನೆಯ ಚಿಂತೆಯಾಗಲಿ, ಕೆಲಸದ ಚಿಂತೆಯಾಗಲಿ ಇರುತ್ತಿರಲಿಲ್ಲ. ಹೀಗಿರುವಾಗ ಚಿಮಣಾ ದಾನವ್ವನೊಡನೆ ಮೆರವಣಿಗೆ ನೋಡಲು ಹೋಗುತ್ತೇನೆಂದಾಗ ಪುತಳಾಬಾಯಿ ಬೇಡವೆನ್ನಲಿಲ್ಲ. ಇನ್ನೂ ಸಣ್ಣವಳು, ಮೆರವಣಿಗೆ ನೋಡುವ ಕೌತುಕವಿದ್ದಾಗ ಬೇಡವೆಂದು ಹೇಗೆ ಹೇಳುವುದು ? ಆಗಲೆಂದು ಕಳಿಸಿಕೊಟ್ಟಳು, ದಾನವ್ವ ಚಿಮಣಾಳೊಡನೆ ಹೊರಬಿದ್ದವಳು ನೇರವಾಗಿ ಅಗಸೆಗೆ ಹೋಗಲಿಲ್ಲ. "ಮಠಕ್ಕ ಹೋಗಿ ಮುಂದ ಹೋದರಾತು ಬಾ" ಎಂದು ಏನೇನೋ ಹೇಳಿದಾಗ ಚಿಮಣಾ ವಿಧಿಯಿಲ್ಲದೆ ಅವಳನ್ನು ಹಿಂಬಾಲಿಸಬೇಕಾಯಿತು.

91. ಊರೂರು ಇದರಲ್ಲಿರುವ ಸಂಧಿ :
(1) ಗುಣ ಸಂಧಿ
(2) ಸವರ್ಣದೀರ್ಘ ಸಂಧಿ
(3) ಆದೇಶ ಸಂಧಿ
(4) ಲೋಪ ಸಂಧಿ

92. ಪಡದಯ್ಯನವರ ಮಠ ಎಲ್ಲಿತ್ತು ?
(1) ವಾಡೆಯ ಬಲಬದಿಗೆ ಹೊಂದಿಕೊಂಡಂತ್ತಿತ್ತು
(2) ಭಕ್ತರ ವಸತಿಗೃಹಗಳ ಬಳಿ ಇತ್ತು
(3) ರಂಗಮಂಟಪದ ಬಳಿ
(4) ದೇವಾಲಯದ ಬಳಿ

93. ದೀಪ ಹಚ್ಚುವ ಹೊತ್ತು ಎಂದರೇನು ?
(1) ಮಧ್ಯರಾತ್ರಿ (2) ಬೆಳಗಿನ ಜಾವ (3) ಸಂಜೆ (4) ಬೆಳಿಗ್ಗೆ

94. ದಾನವ್ವನೊಡನೆ ಚಿಮಣಾ ಮೊದಲು ಹೋಗಿದ್ದು ಎಲ್ಲಿಗೆ ?
(1) ದೇವಾಲಯಕ್ಕೆ (2) ಪಕ್ಕದ ಮನೆಗೆ (3) ಮಠಕ್ಕೆ (4) ಜಾತ್ರೆಗೆ

95. ಕಣ್ಣುಗಳಿಂದ – ಪದದಲ್ಲಿರುವ ವಿಭಕ್ತಿ ಪ್ರತ್ಯಯ :
(1) ತೃತೀಯ ವಿಭಕ್ತಿ
(2) ಸಪ್ತಮಿ ವಿಭಕ್ತಿ
(3) ಪ್ರಥಮಾ ವಿಭಕ್ತಿ
(4) ಪಂಚಮಿ ವಿಭಕ್ತಿ

96. ವಿಶ್ವಾಸ ಪದದ ವಿರುದ್ಧಾರ್ಥಕ ಪದ :
(1) ಅವಿಶ್ವಾಸ (2) ಅವಿನಾಶ (3) ನಿಶ್ವಾಸ (4) ಆಶ್ವಾಸ

97. 'ಶಾಣೇತನಕ್ಕೆ ಬೇಲಿನ ಇಲ್ಲ' – ಎಂಬ ಮಾತು ಏನನ್ನು ಸೂಚಿಸುತ್ತದೆ ?
(1) ಅವನ ಬುದ್ಧಿವಂತಿಕೆ ಜಗತ್ತಿನಾದ್ಯಂತ ಪ್ರಸಿದ್ಧವಾಗಿತ್ತು
(2) ಪಡದಯ್ಯ ತುಂಬಾ ದಡ್ಡನಾಗಿದ್ದ
(3) ಪಡದಯ್ಯನ ಬುದ್ಧಿವಂತಿಕೆಗೆ ಎಣೆಯೇ ಇಲ್ಲ
(4) ಪಡದಯ್ಯನ ಬುದ್ಧಿತನಕ್ಕೆ ಬೇಲಿ ಹಾಕಬೇಕು

98. ಮನದಾಶಯ ಎಂದರೆ :
(1) ಮನೋರೋಗ (2) ಸಂಕಲ್ಪ (3) ಶುಭಾಶಯಗಳು (4) ಮನಸ್ಸಿನ ಇಚ್ಛೆ

99. ಊರಿಗೆ ಊರೇ ದಂಗಾಗಲು ಕಾರಣವೇನು ?
(1) ಜಾತ್ರೆಗೆ ಬಂದ ಹೆಣ್ಣುಮಕ್ಕಳನ್ನು ನೋಡಿ
(2) ಎತ್ತುಗಳ ಮೆರವಣಿಗೆಗೆ
(3) ವಾಡೆಯ ಎತ್ತುಗಳ ವೈಭವಕ್ಕೆ
(4) ಕಾರ ಹುಣ್ಣಿಮೆಯ ವೈಭವಕ್ಕೆ

**ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100-105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಇಡೀ ದಿನ ನಾನು ಒಂದು ಮರ; ನಾನೂ ಒಂದು ಕರಿಯ ವಾಲ್ನಟ್‌ಮರ ಅಂತ ಧ್ಯಾನ ಮಾಡಿದೆ.
ಸಂಜೆಹೊತ್ತಿಗೆ ಮೂರನೇ ಮನೆಯ ಬಿಳಿಜೂಲುನಾಯಿ ಮೂಸುತ್ತ ಬಂದು ಹಿಂಗಾಲೆತ್ತಿ ನನ್ನ ಕಾಲಮೇಲೆ
ಬೆಚ್ಚಗೆ ಒಂದಮಾಡಿತು.
ರಾತ್ರಿ ದೊಡ್ಡ ಮಳೆ, ಬಿರುಗಾಳಿ ಬೀಸಿ ಬುಡಸಮೇತ ಮರ ಉರುಳಿ; ಆಕಾಶಕ್ಕೆ ಬೇರೆತ್ತಿ ತೋರಿಸಿತು.
ಮುನಿಸಿಪಾಲಿಟಿಯವರು ಲಾರಿ ಎಲೆಕ್ಟ್ರಿಕ್ ಗರಗಸ ತಂದು ಕಡಿದು
ತುಂಬಿಕೊಂಡು ಹೋದರು.
ಬಡಗಿ ಸಣ್ಣ ಗರಗಸ ಆಡಿಸಿ ಹತ್ತರಿಹೊಡೆದು, ಜೇನುಗೂಡಿನ ಮೇಣ ಹಾಕಿ ಪಾಲಿಷ್ ಮಾಡಿ ಮೇಜು, ಕುರ್ಚಿ ಎಲ್ಲ ಮಾಡಿಕೊಟ್ಟ.

**100.** ಹಿಂಗಾಲು – ಈ ಪದದಲ್ಲಿನ ಸಮಾಸದ ಸ್ವರೂಪ :

(1) ಅರಿಸಮಾಸ (2) ಬಹುವ್ರೀಹಿ ಸಮಾಸ
(3) ಅಂಶೀ ಸಮಾಸ (4) ಕ್ರಿಯಾ ಸಮಾಸ

**101.** ಆಕಾಶಕ್ಕೆ – ಈ ಪದದಲ್ಲಿನ ವಿಭಕ್ತಿಯನ್ನು ಗುರುತಿಸಿ :

(1) ಚತುರ್ಥಿ (2) ದ್ವಿತೀಯಾ (3) ಪ್ರಥಮಾ (4) ತೃತೀಯಾ

**102.** ಮರಕ್ಕೆ ಆದದ್ದು ಏನು ?

(1) ಧ್ಯಾನದ ಮರವು ಇನ್ನೊಂದು ರೂಪು ತಾಳಿತು
(2) ಮನುಷ್ಯ ಮರ ಕಡಿದ
(3) ಮರವೇ ಇಲ್ಲ; ಆದ್ದರಿಂದ ಏನೂ ಆಗಿಲ್ಲ
(4) ಮರ ಮೇಜು, ಕುರ್ಚಿ ಆಯಿತು

**103.** ಅಸ್ತಿತ್ವದ ರೂಪಾಂತರವು ಯಾರಿಗೆ ಆಗಿದೆ ಎಂದು ಕವನ ಹೇಳುತ್ತದೆ ?

(1) ಮರ ಮತ್ತು ಮನುಷ್ಯನಿಗೆ
(2) ಯಾರಿಗೂ ಇಲ್ಲವೆಂದು ಕವನ ಹೇಳುತ್ತಿದೆ
(3) ವಾಲ್ನಟ್ ಮರಕ್ಕೆ
(4) ತಾನು ಮರವೆಂದು ಧ್ಯಾನ ಮಾಡುತ್ತಿದ್ದವನಿಗೆ

**104.** ಧ್ಯಾನದಿಂದ ಧ್ಯಾನಿಸಿದವನಿಗೆ ಆದ ಅನುಭವ ಏನು ?

(1) ತನ್ನ ಬದುಕಿನಲ್ಲಿ ಬದಲಾವಣೆ ಆಗಿದ್ದು
(2) ಏನೂ ಆಗದೇ ಹಾಗೆ ಉಳಿದದ್ದು
(3) ತನ್ನ ಅಸ್ತಿತ್ವದಲ್ಲಿ ಪರಿವರ್ತನೆಯಾಗಿದ್ದು
(4) ತಾನು ತನ್ನ ಅಸ್ತಿತ್ವ ಕಳೆದುಕೊಂಡಿದ್ದು

**105.** ಬೇರೆತ್ತಿ – ಈ ಪದವನ್ನು ಬಿಡಿಸಿ ಬರೆಯಿರಿ :

(1) ಬೇರು + ಎತ್ತಿ (2) ಬೇರ್ + ಎತ್ತಿ (3) ಬೇರೆ + ಎತ್ತಿ (4) ಬೇ + ರೆತ್ತಿ

106. ಸಂಜ್ಞಾ ಭಾಷೆಯ ಸಂಬಂಧದಲ್ಲಿ ಈ ಕೆಳಕಂಡ ಅಂಶಗಳಲ್ಲಿ ಯಾವುದು ಸರಿಯಲ್ಲ ?

(1) ಸಂಜ್ಞಾ ಭಾಷೆಗೆ ವ್ಯಾಕರಣ ಇರುವುದಿಲ್ಲ

(2) ಸಂಜ್ಞಾ ಭಾಷೆಗೆ ವ್ಯಾಕರಣವಿದೆ

(3) ಸಂಜ್ಞಾ ಭಾಷೆಯಲ್ಲಿ ಹಲವಾರು ವೈವಿಧ್ಯತೆಗಳಿವೆ

(4) ಸಂಜ್ಞಾ ಭಾಷೆ ಸ್ವಾಭಾವಿಕ ಭಾಷೆಯಾಗಿದೆ

107. ವಿವಿಧ ಗುಂಪುಗಳಲ್ಲಿರುವ ಕಲಿಯುವವರಿಗೆ ಈ ಮುಂದಿನ ಕಲಿಕಾ ಕೆಲಸವನ್ನು ನೀಡಲಾಗಿತ್ತು. ಈ ಶಬ್ದಸಂಪತ್ತಿನ ಕಲಿಕಾ ಚಟುವಟಿಕೆಯನ್ನು ಏನೆಂದು ಕರೆಯುತ್ತಾರೆ ?

ಈ ಮುಂದಿನ ಪದಗಳಿಗೆ ಸಂಬಂಧಿಸಿದ ಪದಗಳು ಮತ್ತು ಪದಾವಳಿಗಳನ್ನು ಗುರುತಿಸಿ.

(ಕುಟುಂಬ) (ಸಂಬಂಧ) (ಭಾವನೆ)

(1) ಶಬ್ದಕೋಶ ಸಮುಚ್ಛಯ (Cluster vocabulary)

(2) ಪದ ಜಾಲ (Word web)

(3) ವಿಷಯಾಧಾರಿತ ಶಬ್ದಕೋಶ (Thematic vocabulary)

(4) ಪದ ಗುಚ್ಛಗಳು (Word clusters)

108. ವ್ಯಾಕರಣವನ್ನು ಬೋಧಿಸುವ–ಕಲಿಸುವ ವಿಷಯದಲ್ಲಿ ಕಾರ್ಯವಿಧಾನಾತ್ಮಕ ಜ್ಞಾನ ಎಂದರೆ :

(1) ವ್ಯಾಕರಣಾತ್ಮಕ ವಿಷಯಗಳ ನಿಯಮಗಳನ್ನು ತಿಳಿದುಕೊಳ್ಳುವುದು

(2) ಭಾಷೆ ಮತ್ತು ಅದರ ಸಂಸ್ಕೃತಿಯನ್ನು ತಿಳಿದುಕೊಳ್ಳುವುದು

(3) ವ್ಯಾಕರಣಾತ್ಮಕ ವಿಷಯಗಳನ್ನು ಹೇಗೆ ನಿರ್ವಹಿಸಬೇಕೆಂದು ತಿಳಿದುಕೊಳ್ಳುವುದು

(4) ವ್ಯಾಕರಣಾತ್ಮಕ ವಿಷಯಗಳ ಬಗ್ಗೆ ತಿಳುವಳಿಕೆ

109. ಒಬ್ಬ ಓದುಗನು ನಿರ್ದಿಷ್ಟ ವಿಷಯದ ಬಗ್ಗೆ ತಿಳಿದುಕೊಳ್ಳಲು ವಾರ್ತಾಪತ್ರಿಕೆಯಲ್ಲಿ ವಾರ್ತೆಗಳ ವಿವರದ ಮೂಲಕ ಓದುತ್ತಾನೆ. ಈ ರೀತಿಯಲ್ಲಿ ಓದುವುದನ್ನು ಏನೆಂದು ಕರೆಯುತ್ತಾರೆ ?

(1) ಕಣ್ಣು ಹಾಯಿಸುವುದು (Scanning)

(2) ಅಧ್ಯಯನ ಕೌಶಲ್ಯತೆ

(3) ವಿಮರ್ಶಾತ್ಮಕವಾಗಿ ಓದುವುದು

(4) ಸ್ಥೂಲವಾಗಿ ಓದುವುದು (Skimming)

110. ಭಾಷಾ ಶಿಕ್ಷಕರು ಇಂಗ್ಲಿಷ್ ಭಾಷೆಯಲ್ಲಿ ಕತೆ ಹೇಳಿ, ಕಲಿಯುವವರಿಗೆ ಗುಂಪಿನಲ್ಲಿ ಅವರಿಗೆ ತಿಳಿದಿರುವ ಭಾಷೆಯಲ್ಲಿ ಕತೆಯನ್ನು ಹೇಳುವಂತೆ ತಿಳಿಸುತ್ತಾರೆ. ಆನಂತರ ತರಗತಿಯಲ್ಲಿನ ಸಾಮಾನ್ಯ ಭಾಷೆಯಲ್ಲಿ ಕತೆಯನ್ನು ಹೇಳುವಂತೆ ತಿಳಿಸುತ್ತಾರೆ. ಈ ಶೈಕ್ಷಣಿಕ ತಂತ್ರವನ್ನು ಏನೆಂದು ಕರೆಯುತ್ತಾರೆ ?

(1) ಬಹುಭಾಷಾ ಬೋಧನೆ (2) ಭಾಷಾರ್ಜನೆ

(3) ಭಾಷಾತೀತ ತಂತ್ರ (4) ಬಹುಭಾಷಿಕ ನೀತಿ

111. ಶ್ರೇಯಾ VIನೇ ತರಗತಿಯ ವಿದ್ಯಾರ್ಥಿನಿ. ಅವಳ ತಂದೆಗೆ ವರ್ಗಾವಣೆಯಾಗಿದ್ದರಿಂದ ಅವರು ಪಂಜಾಬ್‌ನ ಜಲಂಧರ್‌ನಿಂದ ತಮಿಳುನಾಡಿನ ಮಧುರೈಗೆ ಹೋಗುತ್ತಾರೆ. ಪಂಜಾಬಿ ಭಾಷೆಯು ಮಾತೃಭಾಷೆಯಾಗಿ ಗೊತ್ತಿದೆ. ಇಂಗ್ಲಿಷ್ ಭಾಷೆಯನ್ನು ಶಾಲೆಯಲ್ಲಿ ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ್ದಾಳೆ. ತನ್ನ ನೆರೆಹೊರೆಯಿಂದ ತಮಿಳನ್ನೂ ಕಲಿತು ಅದನ್ನೂ ಓದಲು ಮತ್ತು ಬರೆಯಲು ಸಮರ್ಥಳಾಗಿದ್ದಾಳೆ. ಅವಳಿಗೆ ಗೊತ್ತಿರುವ ಭಾಷೆಗಳ ಆಧಾರದ ಮೇಲೆ ಈ ಮುಂದಿನ ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿ ?

(1) ಪಂಜಾಬಿ, ತಮಿಳು ಮತ್ತು ಇಂಗ್ಲಿಷ್ – ಈ ಮೂರೂ ಭಾಷೆಗಳು ಕಲಿಕೆಯಿಂದ ಬಂದಿದೆ.
(2) ಅವಳ ಇಂಗ್ಲಿಷ್ ಭಾಷೆಯು ಭಾಷಾರ್ಜನೆಯಿಂದ ಬಂದಿದೆ ಮತ್ತು ಪಂಜಾಬಿ ಮತ್ತು ತಮಿಳು ಭಾಷಾ ಕಲಿಕೆಯಿಂದ ಬಂದಿದೆ.
(3) ಅವಳಿಗೆ ಪಂಜಾಬಿ ಮತ್ತು ತಮಿಳು ಭಾಷೆಯು ಅರ್ಜನೆಯಿಂದಲೇ ಬಂದಿದೆ. ಇಂಗ್ಲಿಷ್, ಭಾಷೆಯು ಕಲಿಕೆಯಿಂದ ಬಂದಿದೆ.
(4) ಅವಳಿಗೆ ತಮಿಳು ಭಾಷೆಯು ಭಾಷಾರ್ಜನೆಯಿಂದ ಬಂದಿದೆ ಮತ್ತು ಇಂಗ್ಲಿಷ್ ಮತ್ತು ಪಂಜಾಬಿ ಭಾಷೆಯು ಕಲಿಕೆಯಿಂದ ಬಂದಿದೆ.

112. VIIನೇ ತರಗತಿಯ ಶಿಕ್ಷಕರೊಬ್ಬರು ಕಲಿಯುವ ವಿದ್ಯಾರ್ಥಿಗಳಿಗೆ ಜೋಡಿ ಜೋಡಿಯಾಗಿ ಕೆಲಸ ಮಾಡುವ ಚಟುವಟಿಕೆಯನ್ನು ನಡೆಸಿದರು. ಅದರಲ್ಲಿ ಜೋಡಿಗಳಿಗೆ ಹತ್ತು ವಾಕ್ಯಗಳ ಕತೆಯನ್ನು ನೀಡಲಾಗಿದೆ. ಜೋಡಿಗಳಲ್ಲಿ ಒಂದು ಜೋಡಿಯು ಮೊದಲ ವಾಕ್ಯವನ್ನು ಓದಿತು. ಜೋಡಿಗಳಲ್ಲಿ ಇತರರು ಆ ವಾಕ್ಯವನ್ನು ಬರೆಯುತ್ತಾರೆ. ನಂತರ ಜೋಡಿಗಳಲ್ಲಿದ್ದ ಒಬ್ಬರು ಎರಡನೇ ವಾಕ್ಯ ಓದುತ್ತಾರೆ ಮತ್ತು ಜೋಡಿಗಳಲ್ಲಿ ಮೊದಲನೆಯವರು ಎರಡನೇ ವಾಕ್ಯವನ್ನು ಬರೆಯುತ್ತಾರೆ. ಇದೇ ರೀತಿ ಜೋಡಿಗಳು ಇಡೀ ಕತೆಯನ್ನು ಮುಗಿಸಿದರು. ಆನಂತರ ಅವರು ಅವರಿಗೆ ನೀಡಲಾದ ಮೂಲ ಪಠ್ಯದೊಂದಿಗೆ ಅವರು ಬರೆದಿರುವುದನ್ನು ಹೋಲಿಸಿ ನೋಡಿದರು. ಈ ಚಟುವಟಿಕೆಯನ್ನು ಏನೆಂದು ಕರೆಯುತ್ತಾರೆ ?

(1) ವಾಕ್ಯದ ಉಕ್ತಲೇಖನ ನೀಡುವುದು
(2) ಪರಸ್ಪರ ಉಕ್ತಲೇಖನ ನೀಡುವುದು
(3) ಪರಸ್ಪರ ಬರೆಯುವುದು
(4) ಪರಸ್ಪರ ಆಲಿಸುವುದು

113. ದಿನನಿತ್ಯದ ಮತ್ತು ಖುದ್ದು ವ್ಯವಹಾರಕ್ಕಾಗಿ ನಾವು ಬಳಸುವ ಭಾಷೆಯನ್ನು ಈ ಮುಂದಿನಂತೆ ಕರೆಯಲಾಗುತ್ತದೆ :

(1) ಸಂವಹನಕ್ಕೆ ಸಂಬಂಧಿಸಿದ ಭಾಷಾ ಕೌಶಲ್ಯಗಳು
(2) ವ್ಯಕ್ತಿಗಳ ನಡುವಿನ ಭಾಷಾ ಪ್ರಾವೀಣ್ಯತೆ
(3) ಅರಿವಿಗೆ ಸಂಬಂಧಿಸಿದ ಶೈಕ್ಷಣಿಕ ಭಾಷಾ ಪ್ರಾವೀಣ್ಯತೆ (CALP)
(4) ಮೂಲಭೂತವಾದ ವ್ಯಕ್ತಿಗಳ ನಡುವಿನ ಸಂವಹನ ಕೌಶಲ್ಯಗಳು (BICS)

114. ಪ್ರೌಢಶಾಲಾ ಹಂತದಲ್ಲಿ (Secondary) ಶಿಕ್ಷಕರು ಒಂದು ಪಠ್ಯ/ಸಣ್ಣಕತೆಯನ್ನು ನೀಡಿ, ಅಧಿಕಾರ ಮತ್ತು ನ್ಯಾಯದ ದೃಷ್ಟಿಕೋನದಿಂದ ಆ ಪಠ್ಯದ ಅರ್ಥ ಮತ್ತು ವಿಷಯವನ್ನು ಓದಿ ಚರ್ಚಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಶಿಕ್ಷಕರು ಕಲಿಯುವವರಲ್ಲಿ ಯಾವ ಅಂಶವನ್ನು ಬೆಳೆಸಲು ಪ್ರಯತ್ನಿಸುತ್ತಾರೆ ?

(1) ವಿಮರ್ಶಾತ್ಮಕ ಭಾಷಾ ಬೆಳವಣಿಗೆ
(2) ಉನ್ನತ ಮಟ್ಟದ ಭಾಷಾ ಕೌಶಲ್ಯಗಳು
(3) ವಿಮರ್ಶಾತ್ಮಕ ಅಕ್ಷರ ಜ್ಞಾನ ಕೌಶಲ್ಯಗಳು
(4) ವಿಮರ್ಶಾತ್ಮಕ ಶೈಕ್ಷಣಿಕ ವಿಧಾನ

115. ಬೋಧನಾ ವಿಧಾನವೊಂದರಲ್ಲಿ, ಶಿಕ್ಷಕರು ಮತ್ತು ನಾಲ್ವರು ವಿದ್ಯಾರ್ಥಿಗಳು ಬೇರೆ ಬೇರೆ ಪಾತ್ರಗಳೊಂದಿಗೆ ಜೊತೆಗೂಡಿ ಕಲಿಯುವ ಗುಂಪನ್ನು ರಚಿಸಿಕೊಳ್ಳುತ್ತಾರೆ. ಪಠ್ಯದ ಉದ್ಧೃತ ಭಾಗದ ವಿಷಯದ ಮೇಲೆ ಸಂಭಾಷಣೆಗಳು ಬರುತ್ತವೆ. ಇದು ಪರಸ್ಪರ ನಿಕಟತೆ ಬೆಳೆಯುವ ವಲಯವನ್ನು ಸೃಷ್ಟಿ ಮಾಡುತ್ತದೆ. ಅದರಲ್ಲಿ ಓದುವುದನ್ನು ಅರಿಯುವ ಸಾಮರ್ಥ್ಯ ಸುಧಾರಿಸುತ್ತದೆ. ಈ ವಿಧಾನವನ್ನು ಈ ಮುಂದಿನಂತೆ ಉಲ್ಲೇಖಿಸಲಾಗುವುದು :

(1) ರಾಚನಿಕ ವಿಧಾನ (Structural Approach)
(2) ಮಾದರಿ ಓದುವಿಕೆ
(3) ವ್ಯಾಕರಣ ಅನುವಾದ ವಿಧಾನ
(4) ವಿನಿಮಯ ಸ್ವರೂಪದ ಬೋಧನೆ (Reciprocal Teaching)

116. ಪರಿಹಾರ ಶಿಕ್ಷಣವು ಈ ಕೆಳಕಂಡವರಿಗಾಗಿ ಇರುತ್ತದೆ :

(1) ತಮ್ಮ ತಮ್ಮ ಬೋಧನೆ / ಕಲಿಕೆ ಕಾರ್ಯತಂತ್ರಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಮಾರ್ಪಾಡು ಮಾಡಿಕೊಳ್ಳಲು / ಸುಧಾರಿಸಿಕೊಳ್ಳಲು ಕಲಿಯುವವರಿಗಾಗಿ ಮತ್ತು ಶಿಕ್ಷಕರಿಗಾಗಿ

(2) ಭಾಷಾ ಪತ್ರಿಕೆಯಲ್ಲಿ ಪರೀಕ್ಷೆಯಲ್ಲಿ ಅಂಕಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಕಲಿಯುವವರು ಮತ್ತು ಶಿಕ್ಷಕರಿಗಾಗಿ

(3) ಭಾಷಾ ಕಲಿಕೆಯ ಕೆಲವು ಅಂಶಗಳ ಮೇಲೆ ಗಮನ ನೀಡಬೇಕಾದ ಅಗತ್ಯವಿರುವಂತಹ ಕಲಿಯುವವರಿಗಾಗಿ

(4) ಭಾಷೆಯನ್ನು ಕಲಿಸುವುದಕ್ಕೆ ಕೆಲವು ವಿದ್ಯಾರ್ಥಿಗಳಿಗಾಗಿ ತಮ್ಮ ಬೋಧನಾ ಕ್ರಮವನ್ನು ಮಾರ್ಪಡಿಸಿಕೊಳ್ಳಬೇಕಾದ ಅಗತ್ಯವಿರುವ ಶಿಕ್ಷಕರಿಗಾಗಿ

117. 'ಅಂತರ್‌ಭಾಷಾ' ಗುರುತಿಸುವಿಕೆ ಎಂದರೇನು ?

(1) ಮೂಲ ಭಾಷೆಯ ತಿಳುವಳಿಕೆ ಎರಡನೆಯ ಭಾಷೆಯನ್ನು ಕಲಿಯಲು ಅಡ್ಡಿಯಾಗುತ್ತದೆ ಎಂಬುದಾಗಿ ಕಲಿಯುವವರು ನೀಡುವ ನಿರ್ಣಯ.

(2) ವಿವಿಧ ಭಾಷೆಗಳ ಕಲಿಕೆಗೆ ವಿಭಿನ್ನ ರೀತಿಯ ಸಾಮರ್ಥ್ಯ ಬೇಕಾಗುತ್ತದೆಂದು ಕಲಿಯುವವರು ನೀಡುವ ನಿರ್ಣಯ.

(3) ಮೂಲ ಭಾಷೆಯಲ್ಲಿರುವುದು ಮತ್ತು ಉದ್ದೇಶಿತ ಭಾಷೆಯಲ್ಲಿರುವ ವಿಷಯ ಒಂದೇ ಆಗಿದೆ ಎಂಬುದಾಗಿ ಕಲಿಯುವವನು ನೀಡುವ ನಿರ್ಣಯ.

(4) ಮೂಲ ಭಾಷೆಯಲ್ಲಿರುವ ವಿಷಯ ಹಾಗೂ ಉದ್ದೇಶಿತ ಭಾಷೆಯಲ್ಲಿರುವ ವಿಷಯಗಳು ಒಂದೇ ರೀತಿಯಾಗಿಲ್ಲ ಎಂಬುದಾಗಿ ಕಲಿಯುವವನು ನೀಡುವ ನಿರ್ಣಯ.

118. ಕೋಜ್ಹಿಕೋಡಿನಲ್ಲಿ ಒಂದು ನಿರ್ದಿಷ್ಟ ಸಮುದಾಯವು ಮಾತನಾಡುವ ಮಲಯಾಳಂ ಭಾಷೆಯು ಅದೇ ಸ್ಥಳದಲ್ಲಿ ಇತರರು ಮಾತನಾಡುವ ಮಲಯಾಳಂಗಿಂತ ಸ್ವಲ್ಪ ಭಿನ್ನವಾಗಿದೆ. ನಿರ್ದಿಷ್ಟ ಸಮುದಾಯವು ಮಾತನಾಡುವ ಮಲಯಾಳಂಅನ್ನು ಏನೆಂದು ಕರೆಯಲಾಗಿದೆ ?

(1) ಮಲಯಾಳಂನ ಸಾಮಾಜಿಕ ಉಪಭಾಷೆ

(2) ಅವೆರಡೂ ಬೇರೆ ಬೇರೆ ಭಾಷೆಗಳಾಗಿವೆ

(3) ಮಲಯಾಳಂ ಭಾಷೆಯ ಎರಡು ಪ್ರಕಾರಗಳು

(4) ಮಲಯಾಳಂನ ಪ್ರಾದೇಶಿಕ ಉಪಭಾಷೆ

119. ಈ ಮುಂದಿನವುಗಳಲ್ಲಿ ಯಾವ ಅಂಶವು ವಿಸ್ತೃತ ಓದಿನ ಉದ್ದೇಶಕ್ಕಾಗಿ ಇರುವುದಿಲ್ಲ ?

(1) ವ್ಯಾಕರಣ ಕಲಿಯುವುದಕ್ಕಾಗಿ ಓದುವುದು

(2) ಸಂತೋಷಕ್ಕಾಗಿ ಓದುವುದು

(3) ಪ್ರಶಂಸೆಗಾಗಿ ಓದುವುದು

(4) ಬಹಿರ್ಗಣನೆಗಾಗಿ (Extrapolation) ಓದುವುದು

120. ತ್ರಿಭಾಷಾ ಸೂತ್ರದಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿ ?

(1) ಮಾತೃಭಾಷೆ / ಮನೆ ಭಾಷೆ / ಮೊದಲ ಭಾಷೆಯಾಗಿ ಹಿಂದಿ

(2) ಮಾತೃಭಾಷೆ / ಮನೆ ಭಾಷೆ / ಮೊದಲ ಭಾಷೆಯಾಗಿ ಇಂಗ್ಲಿಷ್

(3) ಮಾತೃಭಾಷೆ / ಮನೆ ಭಾಷೆ / ಮೊದಲ ಭಾಷೆಯಾಗಿ ಪ್ರಾದೇಶಿಕ ಭಾಷೆ

(4) ಇಂಗ್ಲಿಷ್ / ಹಿಂದಿ / ಮನೆ ಭಾಷೆ / ಮೊದಲ ಭಾಷೆಯಾಗಿ ಸುತ್ತಮುತ್ತಣ ಮಾತನಾಡುವ ಭಾಷೆ (Local Language)

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 121-150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

## PART-V

## LANGUAGE-II

## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 121-150)** ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121 - 128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

"ಬಯಕೆಯರಮನೆಯಲ್ಲಿ ಬೋಧಿವೃಕ್ಷದ ಸುಯ್ಲು!" ಎರಡು ವರ್ಷದ ಕೆಳಗೆ, ನಿಮಿಷದಂತೆ ಸರಿದು ನಿಂತ ಎರಡು ವರ್ಷದ ಕೆಳಗೆ, ಇಲ್ಲಿ ಮೈಯುಬ್ಬಿಸಿ ಮಲಗಿದ ಈ ನುಣುವು ಹೂಚೆಲ್ಲಿದ ಹಾದಿಯಲ್ಲಿ ನಡೆಯುತ್ತಿದ್ದಾಗ.. ಬೆನ್ನಹಿಂದೆ ನೀಲಿಯಲ್ಲಿ ಬೆಣ್ಣೆಯಂಥ ಚಂದ್ರ... ಕೌಮುದಿಯ ಮಾಯೆಯಲ್ಲಿ ರಂಗುರಂಗಿನ ಹಾದಿಯನ್ನು ಸವರಿ ಸಾಗಿದ ಅವನ ಪುಟ್ಟ ಕರಿಯ ನೆರಳು ತಲೆಗೂದಲಿಗೆ ಕಚಗುಳಿಯಿಟ್ಟು, ಮರದ ಎಲೆಯೇರಿ ನಗುತ್ತಿದ್ದ ಕಳ್ಳ ತಂಗಾಳಿ...

ಆದರೆ ಇವೆಲ್ಲವನ್ನೂ ಮರೆಸಿ, ಮನಸ್ಸಿನೆದುರು ಸುಳಿಯುತ್ತಿದ್ದ ಆ ಮುದ್ದು ಮುಖ ಸೂಜಿಗಲ್ಲಿನಂತೆ ಹಾದಿಯುದ್ದಕ್ಕೂ ಅವನನ್ನು ಎಳೆಯುತ್ತಿದ್ದ ಆ ಪುಟ್ಟ ಗುಡಿಸಲು–ಎದುರಿನ ಮಲ್ಲಿಗೆ ಮಂಟಪ ಬಾಗಿಲ ಬಳಿ ಜೋಲಾಡುವ ಗಿಣಿಯ ಪಂಜರದ ಬಳಿ ಚೆಂದುಟಿ ಅದುರಿಸಿ, ನಾಚಿ ನಾಚಿ ಅವನ ಹೆಸರು ಕಲಿಸುತ್ತ, ಸುಟ್ಟು ಸುಯ್ದು ದಾರಿ ಕಾಯುತ್ತ ನಿಂತಿರುತ್ತಿದ್ದ ಕಾಮಾಕ್ಷಿ...

ಕಾಮಾಕ್ಷಿ, ಪುಟ್ಟ ಗುಡಿಸಲು, ಹೂದೋಟ, ಏಕಾಂಕ, ಗಿಣಿಯ ಪಂಜರ, ಸ್ವಾತಂತ್ರ ಜನಜಂಗುಳಿಯ ಗೊಂದಲದಿಂದ ದೂರ, ದೂ...ರ?....ಆಹ್! ಬೆನ್ನಹಿಂದೆ ನಗುವ ಚಂದ್ರ, ದಾರಿ ತುಂಬ ರಂಗುರಂಗು ಪುಟ್ಟ ನೆರಳು, ನಡೆನಡೆದು ಸವೆದ ಹಾದಿ.... ಸವೆದ ಹಾದಿ ?

ಅಲ್ಲಿಯೇ ಕವಲೊಡೆದು ಹಾಯುವ ಇನ್ನೊಂದು ಹಾದಿಯನ್ನು ಯಾರು ನೋಡಿಯಾರು ?...

ನೋಡಿದರೂ ಯಾರು ನಡೆದಾರು ಕಲ್ಲು ಮುಳ್ಳಿನ ಆ ಕೊರಕಲು ಹಾದಿಯಲ್ಲಿ ?...

ನಡೆದರೂ ಯಾರು ಹೋದಾರು ಅದು ಕೊಂಡೊಯ್ದು ಬಿಡುವ ಆ ಪರ್ವತದ ನೆತ್ತಿಯ ತುದಿಗೆ ??... ಮಲಗಲು ಬರುವ ಮೋಡಗಳಲ್ಲದೆ ಮತ್ತಾರು, ಆ ಏಕಾಂತದ ನಡುವೆ ಹೆಸರು ಸುಳಿದಿಲ್ಲವೆ!

ಅವನ ಹೆಸರು ಒಮ್ಮೆ ಅಲ್ಲಿ ಸುಳಿದಿಲ್ಲವೆ ? ಪರ್ವತ ಒಮ್ಮೆ 'ರಾಮೂ' ಎಂದು ಕೂಗಿ ಕರೆಯಲಿಲ್ಲವೆ?.... "ರಾಮೂ" ಏನು ಗಂಭೀರವಾಗಿ ಕರೆದಿತ್ತು!!...

ಅಂದೇ.... ಅಂದೇ.... ಈ ಕೊರಕಲು ಹಾದಿ ತುಳಿದು ಪರ್ವತದ ನೆತ್ತಿಗೆ ಧಾವಿಸಬೇಕೆನ್ನಿಸಿತ್ತು... ರಾ...ಮೂ... ಏನು ಮೋಡಿ ಬೀರಿ ಕರೆದಿತ್ತು.

**121.** ಕಾಮಾಕ್ಷಿಯ ಕಾರ್ಯವೇನು ?

(1) ಪ್ರಿಯಕರನ ಬಗ್ಗೆ ಅತೀವ ಪ್ರೀತಿ

(2) ಪ್ರಿಯಕರನ ಬಗ್ಗೆ ತುಂಟತನದ ಕೋಪ

(3) ತನ್ನ ಪ್ರಿಯಕರನ ನೆನಪಿನಲ್ಲಿ ಕಾಲ ಕಳೆಯುವುದು

(4) ಪ್ರಿಯಕರನ ದಾರಿಯನ್ನು ಕಾಯುತ್ತ ಇರುವುದು

122. ಇಡೀ ಕಥನ ಯಾವ ವಸ್ತುವನ್ನು ಹೊಂದಿದೆ ?

(1) ಸಂಸಾರವನ್ನು ಬಿಟ್ಟು ಅಲೌಕಿಕದ ಕಡೆಗೆ ವ್ಯಕ್ತಿಯ ನಡೆ

(2) ಲೌಕಿಕದ ಸೌಂದರ್ಯ, ಅಲೌಕಿಕದ ಕಠಿಣ ಹಾದಿ

(3) ಸಂಸಾರದ ದುಃಖ–ಸುಖಗಳ ಬಗ್ಗೆ ವೈರಾಗ್ಯ

(4) ಸಂಸಾರವನ್ನು ಬಿಟ್ಟು ಅಲೌಕಿಕದ ಕಡೆಗೆ ನಡೆದ ವ್ಯಕ್ತಿಯ ಸಂಘರ್ಷ

123. 'ಸೂಜಿಗಲ್ಲು' – ಈ ಪದದ ಅರ್ಥ :

(1) ಆಕರ್ಷಣೆ (2) ಮನಸೆಳೆ

(3) ಆಯಸ್ಕಾಂತ (4) ಪೋಣಿಸುವ ಸೂಜಿ

124. 'ಕಲ್ಲು ಮುಳ್ಳಿನ ಕೊರಕಲು ಹಾದಿಯಲಿ' – ಎನ್ನುವ ವಾಕ್ಯ ಇಲ್ಲಿ ಯಾವುದಕ್ಕೆ ಸೂಚ್ಯಾಂಕವಾಗಿದೆ ?

(1) ಚುಚ್ಚುವ ಅನುಭವಕ್ಕೆ (2) ಕಠಿಣವಾದ ಸಾಧನೆಯ ಮಾರ್ಗ

(3) ಪ್ರಯಾಸದ ಸಾಧನೆಗೆ (4) ಕಷ್ಟಕರ ನಡಿಗೆಗೆ

125. ಇಡೀ ಅನುಭವದ ವಿವರ ಯಾವ ಕಾಲಕ್ಕೆ ಸಂಬಂಧಿಸಿದ್ದಾಗಿದೆ ?

(1) ಭೂತಕಾಲಕ್ಕೆ (2) ಭವಿಷ್ಯದ್‌ಕಾಲಕ್ಕೆ

(3) ಅಪೂರ್ಣ ವರ್ತಮಾನಕ್ಕೆ (4) ವರ್ತಮಾನ ಕಾಲಕ್ಕೆ

126. ಪರ್ವತವು ಇಲ್ಲಿ ಯಾವುದಕ್ಕೆ ಸಂಕೇತವಾಗಿದೆ ?

(1) ಏಕಾಂತದ ಜಾಗಕ್ಕೆ (2) ಸಾಧನೆಯ ಹಠಕ್ಕೆ

(3) ಲೌಕಿಕವನ್ನು ಬಿಟ್ಟು ಪರಮಾರ್ಥಕ್ಕೆ (4) ಮೋಡಗಳ ಕಾಣದ ಸೌಂದರ್ಯಕ್ಕೆ

127. ಹೂದೋಟ – ಈ ಪದದ ಸಮಾಸವೇನು ?

(1) ಕರ್ಮಧಾರಯ ಸಮಾಸ (2) ಅಂಶೀ ಸಮಾಸ

(3) ಗಮಕ ಸಮಾಸ (4) ತತ್ಪುರುಷ ಸಮಾಸ

128. 'ಬಯಕೆಯರಮನೆಯಲ್ಲಿ ಬೋಧಿವೃಕ್ಷದ ಸುಯ್ಲು' – ಇಲ್ಲಿ ಚಿತ್ರಿತವಾಗಿರುವ ಭಾವ :

(1) ಭೋಗ ಮತ್ತು ವೈರಾಗ್ಯಗಳ ತಾಕಲಾಟ

(2) ಭೋಗದ ನಡುವೆ ವೈರಾಗ್ಯದ ಆವೇಗ

(3) ನಿಟ್ಟುಸಿರು ಬಿಡುತ್ತಿರುವ ವೈರಾಗ್ಯ

(4) ಬಯಕೆಯ ನಡುವೆ ಜ್ಞಾನದ ಬೆಳಕು

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129-135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಗೊರೂರು ರಾಮಸ್ವಾಮಿ ಐಯಂಗಾರರ ಲಲಿತ ಪ್ರಬಂಧ "ನಮ್ಮ ಊರಿನ ರಸಿಕರು" ಮತ್ತು ಯು.ಆರ್. ಅನಂತಮೂರ್ತಿಯವರ ಕಾದಂಬರಿ "ಸಂಸ್ಕಾರ" ಎಂಬೀ ಕೃತಿಗಳು ತೀರಾ ಭಿನ್ನವೆಂದು ಮೇಲುನೋಟಕ್ಕೆ ನಮಗೆ ಕಾಣಿಸುವುದು ಸಹಜವೇ. ಆದರೆ ಗಮನಿಸಿ ನೋಡಿದರೆ ಹಲವಾರು ಸಾದೃಶ್ಯಗಳೂ ಕಾಣಿಸಬಹುದು. ಆದರೆ ಇವು ವೈದೃಶ್ಯವಿಲ್ಲದ ಸಾದೃಶ್ಯಗಳೂ ಅಲ್ಲ. ಈ ಕೃತಿಗಳು ಹತ್ತಿರ ಸೇರುವ ಒಂದು ಸ್ಥಳ ಆಂಜನೇಯನ ಗುಡಿ. ಎರಡೂ ಕೃತಿಗಳಲ್ಲಿ ಆಂಜನೇಯನ (ಮಾರುತಿಯ) ಗುಡಿಯ ಪ್ರಸ್ತಾಪ ಬರುತ್ತದೆ. ಎರಡರಲ್ಲೂ ಭಕ್ತರು ಕೋರಿಕೆಯೊಂದನ್ನು ಮುಂದಿಟ್ಟು ದೇವರ ಉತ್ತರಕ್ಕಾಗಿ ಕಾಯುತ್ತಾರೆ. ಗೊರೂರರು ಇದಕ್ಕೆ 'ದೇವರನ್ನು ಮಾತನಾಡಿಸುವುದು' ಎಂದು ಕರೆಯುತ್ತಾರೆ. ದೇವರು ನೇರವಾಗಿ ಮಾತಾಡುವುದಿಲ್ಲ, ಆದರೆ ತನ್ನ ಮೈಮೇಲಣ ಹೂವನ್ನು, ಎಡಕ್ಕೋ ಬಲಕ್ಕೋ ಉದುರಿಸುವ ಮೂಲಕ ಉತ್ತರದ ಸೂಚನೆಯೊಂದನ್ನು ನೀಡಬಹುದು. ಎಡಕ್ಕೆ ಉದುರಿಸಿದರೆ ನಕಾರವೆಂದೂ, ಬಲಕ್ಕೆ ಉದುರಿಸಿದರೆ ಸಕಾರವೆಂದೂ ಅರ್ಥ. ಆದ್ದರಿಂದ ದೇವರಿಗೆ ಕೇಳುವ ಪ್ರಶ್ನೆ ಈ ಉತ್ತರಗಳಿಗೆ ಯೋಗ್ಯವಾಗಿರಬೇಕು. ಎರಡೂ ಕೃತಿಗಳಲ್ಲಿನ ಈ 'ದೇವರನ್ನು ಮಾತನಾಡಿಸು'ವ ಸನ್ನಿವೇಶದಲ್ಲಿ ಸಾದೃಶ್ಯವೂ ಇದೆ, ವೈದೃಶ್ಯವೂ ಇದೆ. ಆದರೆ ಹೂವು ಭೌತಿಕ ಶಕ್ತಿಯಿಲ್ಲದೆ ತಾನಾಗಿಯೇ ಕೆಳಗೆ ಬೀಳುವುದೇ ಎಂಬ ಪ್ರಶ್ನೆ ಏಳುತ್ತದೆ, ಬೀಳದು ಎನ್ನುತ್ತದೆ ಆಧುನಿಕ (ವೈಚಾರಿಕ) ಮನಸ್ಸು. ಹೂವು ಬೀಳುವುದಕ್ಕೆ ಭೌತಿಕವಾದ ಕಾರಣ ಬೇಕು. ಇದು ಗೊರೂರರಿಗೆ ಗೊತ್ತಿದೆ, ಅನಂತಮೂರ್ತಿಯವರಿಗೂ ಗೊತ್ತಿದೆ. ಆದರೆ ಇದು ಲೇಖಕರ ವೈಯಕ್ತಿಕ ನಂಬಿಕೆಯ ಪ್ರಶ್ನೆಯಲ್ಲ, ಅವರು ಚಿತ್ರಿಸುವ ಪಾತ್ರಗಳ ಪ್ರಶ್ನೆ. 'ದೇವರನ್ನು ಮಾತನಾಡಿಸು'ವ ಈ ಒಂದು ಕ್ರಮ ನಮ್ಮ ಹಳ್ಳಿಗಳಲ್ಲಿ ತಲ ತಲಾಂತರದಿಂದಲೂ ನಡೆದುಕೊಂಡು ಬಂದಿದೆ. ದೇವರನ್ನು ಮಾನುಷೀಕರಿಸಿ ಜನ ಜೀವನದ ಒಂದು ಭಾಗವಾಗಿ ಮಾಡಿದುದರ ಬಗೆ ಇದು. ದೇವರು ಎಡದ ಹೂವನ್ನೋ ಬಲದ ಹೂವನ್ನೋ ಕೊಡುತ್ತಾನೆ ಎನ್ನುವುದು ಸನಾತನರ ನಂಬಿಕೆ; ಅದರಂತೆ ಭಕ್ತರು ನಡೆದುಕೊಳ್ಳಬೇಕು. ಇಂಥ ಶಕುನಗಳಲ್ಲಿನ ನಂಬಿಕೆ ಧಾರ್ಮಿಕ ಮನಸ್ಸಿನ ಒಂದು ಅವಿನಾ ಭಾವ. ಅದಕ್ಕೆ ಭಂಗ ಬಂದಾಗ ಮನಸ್ಸಿಗೆ ಘಾತವುಂಟಾಗುತ್ತದೆ. "ಸಂಸ್ಕಾರ"ದಲ್ಲಿ ತನ್ನ ಕಥಾನಾಯಕನಿಗೆ ಉಂಟಾಗುವ ಈ ಘಾತವನ್ನು ಚಿತ್ರಿಸುವುದು ಅನಂತಮೂರ್ತಿಯವರ ಒಂದು ಉದ್ದೇಶ. ನಾಯಕ ಪ್ರಾಣೇಶಾಚಾರ್ಯರ ಮುಂದಿರುವ ಪ್ರಶ್ನೆ. ಧರ್ಮಭ್ರಷ್ಟನಾದ ನಾರಣಪ್ಪನ ಶವಕ್ಕೆ ಬ್ರಾಹ್ಮಣರು ಸಂಸ್ಕಾರ ಮಾಡಬಹುದೇ ಬಾರದೇ ಎನ್ನುವುದು. ಮಕ್ಕಳಾದರೂ ಮಾಡಲಿ ಎಂದರೆ ನಾರಣಪ್ಪನಿಗೆ ಸಂತಾನ ಕೂಡಾ ಇಲ್ಲ. ಈ ಧರ್ಮಪ್ರಶ್ನೆಗೆ ಪ್ರಾಣೇಶಾಚಾರ್ಯರು ಧರ್ಮಶಾಸ್ತ್ರಗಳಲ್ಲಿ ಉತ್ತರ ಹುಡುಕಿದರೂ ಸಿಗುವುದಿಲ್ಲ. ಹೀಗೆ ಜ್ಞಾನಮಾರ್ಗ ಸೋತಾಗ ಅವರು ಹಿಡಿಯುವುದು ಭಕ್ತಿಮಾರ್ಗವನ್ನು. ತಾವು ದಿನವೂ ಪೂಜೆ ಮಾಡುವ ಮಾರುತಿ ಗುಡಿಗೆ ಹೋಗಿ, ಮಾರುತಿವಿಗ್ರಹಕ್ಕೆ ಹೂವೇರಿಸಿ, ಭಕ್ತಿಯಿಂದ ಅದರ ಮುಂದೆ ಕುಳಿತು, ಸಂಸ್ಕಾರದ ಪ್ರಶ್ನೆಗೆ ಉತ್ತರ ನೀಡುವಂತೆ ಮಾರುತಿಯನ್ನು ಅವರು ಕೇಳಿಕೊಳ್ಳುತ್ತಾರೆ. ಸಂಸ್ಕಾರ ಮಾಡಬಹುದು ಎಂದಾದರೆ ಬಲಗಡೆಯ ಹೂವು, ಮಾಡಬಾರದು ಎಂದಾದರೆ ಎಡಗಡೆಯ ಹೂವು ಬೀಳಬೇಕು. ಇದು ಪ್ರಸಾದ. ಮಾರುತಿ ಈ ಸೂಚನೆ ಕೊಟ್ಟೇ ಕೊಡುತ್ತಾನೆ ಎನ್ನುವುದು ಪ್ರಾಣೇಶಾಚಾರ್ಯರ ಅಚಲ ವಿಶ್ವಾಸ :

"ಪ್ರಸಾದಕ್ಕೆಂದು ಕಾಯುತ್ತ ಕೂತ ಪ್ರಾಣೇಶಾಚಾರ್ಯರು ಕಂಗೆಟ್ಟರು. 'ಸಂಸ್ಕಾರವಿಲ್ಲದೆ ಶವ ಕೊಳೆಯುತ್ತಿದೆ; ಮಾರುತಿ, ಎಷ್ಟು ಹೊತ್ತು ನಿನ್ನ ಪರೀಕ್ಷೆ' ಎಂದು ಯಾಚಿಸಿದರು. 'ಕೂಡದು ಎಂದು ನಿನ್ನ ಮತವಾದರೆ ಎಡ ಪ್ರಸಾದವನ್ನಾದರೂ ದಯಮಾಡು' ಎಂದು ಬೇಡಿದರು, ಕಾಡಿದರು ನೀಲಾಂಜನದ ಬೆಳಕಿನಲ್ಲಿ ಪುಷ್ಪಾಲಂಕೃತ ಮಾರುತಿ ಜಗ್ಗಲಿಲ್ಲ; ಎಡಪ್ರಸಾದವನ್ನೂ ಕೊಡಲಿಲ್ಲ, ಬಲಪ್ರಸಾದವನ್ನೂ ಕೊಡಲಿಲ್ಲ. 'ಧರ್ಮಶಾಸ್ತ್ರದಲ್ಲೂ ನನಗೆ ಉತ್ತರ ಸಿಗಲಿಲ್ಲ, ನಿನ್ನಿಂದಲೂ ಸಿಗಲಿಲ್ಲ–ನಾನು ಅಪಾತ್ರನೇನು ಹಾಗಾದರೆ' ಎಂದು ಸಂಶಯಪಟ್ಟರು. 'ಯಾವ ಮುಖದಿಂದ ನನ್ನ ಮೇಲೆ ನಂಬಿಕೆಯಿಟ್ಟವರನ್ನು ಹೋಗಿ ನೋಡಲಿ' ಎಂದು ಅವಮಾನಿತರಾದರು. 'ನನ್ನನ್ನೇ ಪರೀಕ್ಷಿಸುತ್ತಿದ್ದೀಯಲ್ಲ' ಎಂದು ಮಾರುತಿಯನ್ನು ಬಯ್ದರು. ಕತ್ತಲು ಗಾಢವಾದಂತೆ, ಇದು ಕೃಷ್ಣಪಕ್ಷ ಎಂದು ಅರಿತು–ಇದನ್ನು ನನ್ನ ಪರೀಕ್ಷೆಯೆಂದು ಅರಿಯಬೇಡಪ್ಪ, ಕೊಳೆಯುತ್ತಿರುವ ಶವವನ್ನು ನೆನಪಿಟ್ಟುಕೊ–ಎಂದು ಬುದ್ಧಿ ಹೇಳಿದರು. ಮಾರುತಿ ಯಾವುದಕ್ಕೂ ಜಗ್ಗದೆ ಪರ್ವತದ ಕಡೆ ಮುಖ ತಿರುಗಿಸಿ ನಿಂತ. ಆಚಾರ್ಯರಿಗೆ ಥಟ್ಟನೆ ತನ್ನ ಹೆಂಡತಿಗೆ ಔಷಧ ಕೊಡಬೇಕೆಂದು ನೆನಪಾಯಿತು. ಕಣ್ಣುಗಳಲ್ಲಿ ನೀರು ಬರುವುದೊಂದು ಬಾಕಿ–ನಿರಾಸೆಯಿಂದ ಎದ್ದು ನಿಂತರು. ಕಾಲು ಕೂತು ಮರಗಟ್ಟಿತ್ತು. ಕ್ಷೀಣವಾಗಿ ಮೆಲ್ಲ ಮೆಲ್ಲನೆ ನಡೆದರು."

**129.** ಲೇಖನವು ಆಧುನಿಕ ಮನಸ್ಸಿನ ಬಗ್ಗೆ ಹೇಳುವ ಮಾತು :

(1) ಅದು ತೀವ್ರಗಾಮಿ (2) ಅದು ವೈಚಾರಿಕ

(3) ಅದು ಭಾವನಾತ್ಮಕ (4) ಅದು ನಿರ್ಲಿಪ್ತ

**130.** ಈ ಲೇಖನ ಭಾಗವು ಒಟ್ಟಾರೆಯಾಗಿ ಹೇಳುವುದು :

(1) ಎರಡೂ ಬರಹದ ಸಾದೃಶ್ಯ-ವೈದೃಶ್ಯದ ಬಗ್ಗೆ

(2) ಎರಡೂ ಲೇಖನಗಳಲ್ಲಿನ ಮಾರುತಿ ಉತ್ತರ ಕೊಡುವ ಬಗ್ಗೆ

(3) ಗೊರೂರರ ಬಗ್ಗೆ

(4) ಸಂಸ್ಕಾರದ ಬಗ್ಗೆ

**131.** ನಮ್ಮ ಊರಿನ ರಸಿಕರು ಒಂದು :

(1) ಲಲಿತ ಪ್ರಬಂಧ (2) ನಾಟಕ (3) ಕಾದಂಬರಿ (4) ಕಥೆ

**132.** ಸನ್ನಿವೇಶದಲ್ಲಿ – ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ :

(1) ತೃತೀಯಾ (2) ಸಪ್ತಮಿ (3) ಪ್ರಥಮಾ (4) ದ್ವಿತೀಯಾ

**133.** ಅವರು ಚಿತ್ರಿಸುವ ಪಾತ್ರಗಳ ಪ್ರಶ್ನೆ – ಈ ವಾಕ್ಯದಲ್ಲಿರುವ 'ಅವರು' ಎನ್ನುವುದು :

(1) ಮಧ್ಯಮ ಪುರುಷ

(2) ಉತ್ತಮ ಪುರುಷ ಬಹುವಚನ

(3) ಉತ್ತಮ ಪುರುಷ

(4) ಪ್ರಥಮ ಪುರುಷ

**134.** ಸಂಸ್ಕಾರ ಕಾದಂಬರಿ ಚಿತ್ರಿಸುವುದು :

(1) ಮಾರುತಿ ಪ್ರಸಾದ ನೀಡಿದ್ದನ್ನು

(2) ಶವ ಸಂಸ್ಕಾರವನ್ನು

(3) ನಾರಣಪ್ಪನ ಶವ ಸಂಸ್ಕಾರವನ್ನು

(4) ಪ್ರಾಣೇಶಾಚಾರ್ಯರಿಗೆ ಉಂಟಾದ ಆಘಾತವನ್ನು

**135.** 'ಮರಗಟ್ಟು' – ಪದದ ಅರ್ಥ :

(1) ಸುಂದರವಾಗು (2) ಮರಗೆಲಸ

(3) ಚಲನೆ ಇಲ್ಲದಂತಾಗು (4) ಮರವನ್ನು ಕಟ್ಟು

**136.** ಭಾಷಾ ಶಿಕ್ಷಣ ಕುರಿತಂತೆ ರಾಷ್ಟ್ರೀಯ ಶಿಕ್ಷಣ ನೀತಿ, 2020 ಕ್ಕೆ ಸಂಬಂಧಿಸಿದಂತೆ ಈ ಮುಂದಿನ ಯಾವ ಸಂಗತಿಗಳು ಸರಿಯಲ್ಲ ?

(1) ತ್ರಿಭಾಷಾ ಸೂತ್ರದ ಅಡಿಯಲ್ಲಿ ಭಾರತೀಯ ಭಾಷೆಗಳನ್ನು ಅಧ್ಯಯನ ಮಾಡುವುದು

(2) ತ್ರಿಭಾಷಾ ಸೂತ್ರದ ಅಡಿಯಲ್ಲಿ ಭಾಷೆಯಾಗಿ ಇಂಗ್ಲೀಷ್ ಭಾಷೆಯನ್ನು ಅಧ್ಯಯನ ಮಾಡುವುದು

(3) ತ್ರಿಭಾಷಾ ಸೂತ್ರದ ಅಡಿಯಲ್ಲಿ ಕ್ಲಾಸಿಕಲ್ ಭಾಷೆಯನ್ನು ಅಧ್ಯಯನ ಮಾಡುವುದು

(4) ತ್ರಿಭಾಷಾ ಸೂತ್ರದ ಅಡಿಯಲ್ಲಿ ಮಾತೃಭಾಷೆ/ಮನೆ ಭಾಷೆಯನ್ನು ಅಧ್ಯಯನ ಮಾಡುವುದು

137. ಒಬ್ಬ ಶಿಕ್ಷಕರು ಇಂಗ್ಲಿಷ್‌ನಲ್ಲಿರುವ ಐದು ವಾಕ್ಯಗಳ ಪಠ್ಯವನ್ನು ಎರಡು ಸಾರಿ ಓದಿಹೇಳಿ, ಪಠ್ಯವನ್ನು ಎಚ್ಚರಿಕೆಯಿಂದ ಆಲಿಸುವಂತೆ ತನ್ನ ವಿದ್ಯಾರ್ಥಿಗಳಿಗೆ ಹೇಳಿದರು. ನಂತರ ತಾನು ಹೇಳಿದ್ದನ್ನು ಯಥಾವತ್ತಾಗಿ ಹೇಳದೇ ತಾನು ಓದಿ ಹೇಳಿದ ಪಠ್ಯಕ್ಕೆ ಹತ್ತಿರವಾದ ಪಠ್ಯವನ್ನು ಮರುಸೃಷ್ಟಿಸುವ ನಾಲ್ಕು ವಿದ್ಯಾರ್ಥಿಗಳು ಗುಂಪಿನಲ್ಲಿ ಕೆಲಸ ಮಾಡುವಂತೆ ಹೇಳಿದರು. ಈ ಚಟುವಟಿಕೆಯನ್ನು ಏನೆಂದು ಕರೆಯುತ್ತಾರೆ ?

(1) ಸಾಮೂಹಿಕ ಉಕ್ತಲೇಖನ
(2) ಕೇಳುವ ಕೆಲಸ
(3) ಬರೆಯುವ ಕೆಲಸ
(4) ಪ್ಯಾರಾಗ್ರಾಫಿನ ಉಕ್ತಲೇಖನ

138. ಒಂದು ಭಾಷೆಯಲ್ಲಿ ಚೆನ್ನಾಗಿ ಬರೆಯುವುದನ್ನು ಕಲಿಯುವುದಕ್ಕಾಗಿ ಈ ಮುಂದಿನ ಯಾವ ಕಾರ್ಯವಿಧಾನಗಳು ಸೇರಿವೆ ?

(1) ಮಂಥನ ಮಾಡುವುದು–ಮುಖ್ಯಾಂಶಗಳನ್ನು ಬರೆದಿಟ್ಟುಕೊಳ್ಳುವುದು–ಕರಡನ್ನು ಬರೆಯುವುದು–ಸಂಪಾದನೆ ಮಾಡುವುದು–ರೂಪುರೇಷೆ ಸಿದ್ಧಪಡಿಸುವುದು–ಅಂತಿಮಗೊಳಿಸುವುದು.
(2) ಮಂಥನ ಮಾಡುವುದು–ಮುಖ್ಯಾಂಶಗಳನ್ನು ಬರೆದಿಟ್ಟುಕೊಳ್ಳುವುದು–ರೂಪುರೇಷೆ ಸಿದ್ಧಪಡಿಸುವುದು–ಕರಡನ್ನು ಬರೆಯುವುದು–ಸಂಪಾದನೆ ಮಾಡುವುದು–ಅಂತಿಮಗೊಳಿಸುವುದು.
(3) ಮಂಥನ ಮಾಡುವುದು – ರೂಪುರೇಷೆ ಸಿದ್ಧಪಡಿಸುವುದು–ಕರಡು ಸಿದ್ಧಪಡಿಸುವುದು–ಮುಖ್ಯಾಂಶಗಳನ್ನು ಬರೆದಿಟ್ಟುಕೊಳ್ಳುವುದು–ಸಂಪಾದನೆ ಮಾಡುವುದು–ಅಂತಿಮಗೊಳಿಸುವುದು.
(4) ಮಂಥನ ಮಾಡುವುದು–ಮುಖ್ಯಾಂಶಗಳನ್ನು ಬರೆದಿಟ್ಟುಕೊಳ್ಳುವುದು–ಕರಡನ್ನು ಬರೆಯುವುದು–ರೂಪುರೇಷೆ ಸಿದ್ಧಪಡಿಸುವುದು–ಸಂಪಾದನೆ ಮಾಡುವುದು–ಅಂತಿಮಗೊಳಿಸುವುದು.

139. ಈ ಮುಂದಿನ ಹೇಳಿಕೆಗಳಲ್ಲಿ ಯಾವ ಹೇಳಿಕೆಯು ಭಾಷಾ ಕಲಿಕೆಯ ವಿಷಯದಲ್ಲಿ ನಿಜ ?

(1) ಸ್ಥಳೀಯ/ಪ್ರಥಮ ಭಾಷೆಯ ಜ್ಞಾನ, ದ್ವಿತಿಯ ಭಾಷೆಯನ್ನು ಕಲಿಯಲು ಪೂರಕವಾಗಿರುತ್ತದೆ.
(2) ಪ್ರಥಮ ಭಾಷೆಯನ್ನು ಕಲಿಯುವುದು ಮತ್ತು ದ್ವಿತೀಯ ಭಾಷೆ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ.
(3) ಸ್ಥಳೀಯ/ಪ್ರಥಮ ಭಾಷೆಯ ಜ್ಞಾನ, ದ್ವಿತೀಯ ಭಾಷೆಯನ್ನು ಕಲಿಯಲು ಅಡ್ಡಿಯಾಗುತ್ತದೆ.
(4) ಸ್ಥಳೀಯ/ಪ್ರಥಮ ಭಾಷೆಯ ಜ್ಞಾನ, ದ್ವಿತಿಯ ಭಾಷೆಯನ್ನು ಕಲಿಯಲು ಏನನ್ನೂ ಮಾಡುವುದಿಲ್ಲ.

140. ಎಲಂ VII ನೇ ತರಗತಿಯ ವಿದ್ಯಾರ್ಥಿಯಾಗಿದ್ದು, ಕನ್ನಡ, ಮರಾಠಿ, ಹಿಂದಿ ಮತ್ತು ಇಂಗ್ಲಿಷ್ – ಈ ನಾಲ್ಕು ಭಾಷೆಗಳನ್ನು ಮಾತನಾಡಲು ಸಮರ್ಥನಿದ್ದಾನೆ. ಮನೆಯಲ್ಲಿ ಪಾಲಕರೊಂದಿಗೆ ಮಾತನಾಡುವಾಗ ಈ ನಾಲ್ಕು ಭಾಷೆಗಳನ್ನೂ ಅವನು ಆರಾಮಾಗಿ ಮಾತನಾಡುತ್ತಾನೆ. ಅವನ ಸ್ನೇಹಿತರಿಗೆ ಮತ್ತು ಶಿಕ್ಷಕರಿಗೆ ಹಿಂದಿ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳು ಬರುವುದರಿಂದ ಅವನು ಶಾಲೆಯಲ್ಲಿ ಈ ಭಾಷೆಗಳನ್ನು ಬಳಸುತ್ತಾನೆ. ಈ ಅಭ್ಯಾಸವನ್ನು ಏನೆಂದು ಕರೆಯುತ್ತಾರೆ ?

(1) ಸಂಕೇತ ಚಲನಶೀಲತೆ (Code moving)
(2) ಅಂತರ್‌ಭಾಷೆ
(3) ಭಾಷಾತೀತವಾದ (Translingual) ಸಾಮರ್ಥ್ಯ
(4) ಸಂಕೇತ ಜಾಲ (Code meshing)

141. ಈ ಕೆಳಕಂಡ ಅಂಶಗಳಲ್ಲಿ ಒಂದು ಶೈಕ್ಷಣಿಕ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಸೂಚಿಸುತ್ತದೆ ಅಥವಾ ಭಾಷೆಗೆ ವಿವಿಧ ವಿಷಯಗಳ ಪರಿಚಯದ ಅಗತ್ಯವನ್ನು ಸೂಚಿಸುತ್ತದೆ. ಇದು :

(1) ತಿಳಿಯಪಡಿಸುವ ಭಾಷಾ ಪ್ರಾವೀಣ್ಯತೆ
(2) ಅರಿವಿಗೆ ಸಂಬಂಧಿಸಿದ (Cognitive) ಶೈಕ್ಷಣಿಕ ಭಾಷಾ ಪ್ರಾವೀಣ್ಯತೆ (CALP)
(3) ಅಂತರ್‌ಭಾಷಾ ಪ್ರಾವೀಣ್ಯತೆ
(4) ಮೂಲಭೂತವಾಗಿ ವ್ಯಕ್ತಿಗಳ ನಡುವೆ ಸಂವಹನ ಕೌಶಲ್ಯಗಳು (BICS)

**142.** ವಿದ್ಯಾರ್ಥಿಗಳು ವಿಷಯದ ವಿರುದ್ಧ ದೃಷ್ಟಿಕೋನವನ್ನು ಮತ್ತಷ್ಟು ಅರ್ಥಮಾಡಿಕೊಳ್ಳಲು ಅವರಿಗೆ ಅವಕಾಶ ನೀಡಲು ಪರಿಗಣಿಸುವಾಗ, ಅವರನ್ನು ವಿಷಯದ ವಿರುದ್ಧ ದೃಷ್ಟಿಕೋನಕ್ಕೆ ಒಡ್ಡಲಾಗುತ್ತಿತ್ತು. ಇದು ವಿದ್ಯಾರ್ಥಿಗಳಲ್ಲಿ ಯಾವ ಪ್ರಕ್ರಿಯೆಯನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ ?

(1) ವಿಮರ್ಶಾತ್ಮಕ ಅಕ್ಷರ ಜ್ಞಾನ
(2) ಅಕ್ಷರ ಜ್ಞಾನವನ್ನು ಹೆಚ್ಚಿಸುವುದು
(3) ವಿಮರ್ಶಾತ್ಮಕ ವಿಶ್ಲೇಷಣೆ
(4) ಪ್ರಕ್ರಿಯಾಧಾರಿತ ಶಿಕ್ಷಣ

**143.** VI ನೇ ತರಗತಿಯ ಶಿಕ್ಷಕರು ಹಲವಾರು ಪದಗಳನ್ನು ಕಲಿಸುವುದಕ್ಕಾಗಿ ತನ್ನ ತರಗತಿಗೆ ಚಮಚ, ತಟ್ಟೆ, ಪಾತ್ರೆಪಗಡೆಗಳು, ಪೆಟ್ಟಿಗೆಗಳು ಮತ್ತು ಕಾವಲಿಯಂತಹ ವಸ್ತುಗಳನ್ನು ತಂದು, ಅಡಿಗೆ ಮನೆಯಲ್ಲಿನ ವಸ್ತುಗಳ ಬಗ್ಗೆ ವಿವರಣೆಯನ್ನು ಬರೆಯಲು ಹೇಳುತ್ತಾರೆ. ಭಾಷಾ ಬೋಧನೆಯಲ್ಲಿರುವಂತೆ ಈ ವಸ್ತುಗಳನ್ನು ಏನೆಂದು ಕರೆಯುತ್ತಾರೆ ?

(1) ಅಡಿಗೆ ವಸ್ತುಗಳು
(2) ವಾಸ್ತವಿಕ ಜೀವನ ಸಂಬಂಧಿ ಕೆಲಸಗಳು
(3) ಬೋಧನಾ ಪರಿಕರಗಳು
(4) ದಿನಬಳಕೆಯ ವಸ್ತುಗಳು

**144.** ಸಮಾಜ ವಿಜ್ಞಾನದ ತರಗತಿಯಲ್ಲಿರುವ ಕಲಿಯುವವರು ತರಗತಿ ಉಪನ್ಯಾಸದ ಮುಖ್ಯಾಂಶಗಳನ್ನು ಗ್ರಹಿಸಲು ಪ್ರಯತ್ನಿಸುತ್ತಾರೆ ಮತ್ತು ಉಪನ್ಯಾಸದ ಮುಖ್ಯಾಂಶಗಳನ್ನು ಗುರುತುಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಕೌಶಲ್ಯವನ್ನು ಏನೆಂದು ಕರೆಯುತ್ತಾರೆ ?

(1) ಬರೆಯುವ ಕೌಶಲ್ಯ
(2) ಅರಿವಿಗೆ ಸಂಬಂಧಿಸಿದ ಕೌಶಲ್ಯ
(3) ಅಧ್ಯಯನ ಕೌಶಲ್ಯತೆ
(4) ಆಲಿಸುವ ಕೌಶಲ್ಯತೆ

**145.** ಕಲಿಕಾ ಫಲಿತಗಳು ಈ ಮುಂದಿನ ವಿಷಯಗಳನ್ನು ಕಲಿಯಲು ಕಲಿಯುವವರನ್ನು ಸಮರ್ಥಗೊಳಿಸಲು ಪ್ರಯತ್ನಿಸುತ್ತವೆ.

(1) ಎಲ್ಲಾ ಕೌಶಲ್ಯಗಳನ್ನು ಕಲಿಯುವ ಕನಿಷ್ಠ ಸಾಧ್ಯತೆಗಳನ್ನು ಸಾಧಿಸಲು
(2) ನಿರ್ದಿಷ್ಟವಾಗಿ ಅರಿಯುವ ರೀತಿಯಲ್ಲಿ ಭಾಷಾ ಪರಿಕರಗಳನ್ನು ಹೊಂದಲು
(3) ನಿರ್ದಿಷ್ಟವಾಗಿ ಅರಿಯುವ ರೀತಿಯಲ್ಲಿ ವ್ಯಾಕರಣ ಜ್ಞಾನವನ್ನು ಹೊಂದಲು
(4) ನಿರ್ದಿಷ್ಟವಾಗಿ ಅರಿಯುವ ರೀತಿಯಲ್ಲಿ ಸಾಮರ್ಥ್ಯವನ್ನು ಗಳಿಸಲು

**146.** ಭಾಷಾತೀತವಾಗಿ ಕಲಿಸುವುದು (Translanguaging) ಎಂದರೇನು ?

(1) ತರಗತಿಯಲ್ಲಿ ಸಂಪನ್ಮೂಲಗಳಾಗಿ ಒಂದು ಭಾಷೆಗಿಂತ ಹೆಚ್ಚಿನ ಭಾಷೆಗಳನ್ನು ಬಳಸುವ ಶೈಕ್ಷಣಿಕ ಪ್ರಕ್ರಿಯೆಯನ್ನು ಸೂಚಿಸುತ್ತದೆ.
(2) ಒಂದು ಶಾಲೆಯಲ್ಲಿ ಎಷ್ಟು ಭಾಷೆಗಳನ್ನು ಬೋಧಿಸಬೇಕಾಗುತ್ತದೆ ಎಂಬ ಬಗ್ಗೆ ಶಿಕ್ಷಣದಲ್ಲಿ ಭಾಷೆ ಎಂಬ ನೀತಿಯನ್ನು ಸೂಚಿಸುತ್ತದೆ.
(3) ಇದು, ಭಾಷೆಗಳನ್ನು ಬೋಧಿಸಿ ಕಲಿಸುವಾಗ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಹೋಗುವುದನ್ನು ಸೂಚಿಸುತ್ತದೆ.
(4) ಕಾಲಕ್ರಮೇಣ ಭಾಷೆಗಳು ಹೇಗೆ ಬದಲಾಗುತ್ತವೆ ಎಂಬುದನ್ನು ಸೂಚಿಸುತ್ತದೆ.

**147.** ಇಲ್ಲಿ ಒಂದು ಪ್ರಶ್ನೆಯನ್ನು ನೀಡಲಾಗಿದೆ. ಅದನ್ನು ಓದಿ, ಅದು ಯಾವ ಪ್ರಕಾರದ ಪ್ರಶ್ನೆಗೆ ಸಂಬಂಧಿಸಿರುತ್ತದೆ ಎಂಬುದನ್ನು ಗುರುತಿಸಿ.

ಚಿಕ್ಕ ಹುಡುಗಿಯ ಕತೆಯನ್ನು ಕೇಳಿದ ನಂತರ ನೀವು ಆಕೆ ಅನುಭವಿಸಿದ ಯಾತನೆ ಸಂಕಟಗಳ ಬಗ್ಗೆ ಮರುಗುತ್ತೀರಿ ಮತ್ತು ಕಷ್ಟವನ್ನು ಎದುರಿಸುವ ಧೈರ್ಯವನ್ನು ಪಡೆದುಕೊಳ್ಳುತ್ತೀರಿ. ಆ ಚಿಕ್ಕ ಹುಡುಗಿಯನ್ನು ಪ್ರಶಂಸೆ ಮಾಡಿ ಅವಳಿಗೆ ಒಂದು ಪತ್ರ ಬರೆಯುವಿರಿ. ಸುಮಾರು 120 ಪದಗಳಲ್ಲಿ ಒಂದು ಪತ್ರ ಬರೆಯಿರಿ. ಈ ಕೆಲಸ ಏನು ?

(1) ಬಹಿರ್ಗಣನೆಯ ಪ್ರಶ್ನೆಗಳು (Extrapolative)
(2) ಅಪ್ರಾಸಂಗಿಕ ಪ್ರಶ್ನೆಗಳು (Discursive)
(3) ಅರ್ಥಗರ್ಭಿತ ಪ್ರಶ್ನೆಗಳು
(4) ದೀರ್ಘ ಉತ್ತರದ ಪ್ರಶ್ನೆಗಳು

148. ತ್ರಿಭಾಷಾ ಸೂತ್ರದ ಸಂಬಂಧದಲ್ಲಿ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ ?

(1) ಎಲ್ಲಾ ಮಕ್ಕಳೂ ಅಧಿಕೃತ ಭಾಷೆಯಾದ ಹಿಂದಿಯಲ್ಲಿ ಶಾಲಾ ಕಲಿಕೆಯನ್ನು ಪ್ರಾರಂಭಿಸುತ್ತಾರೆ ಮತ್ತು ತಮ್ಮ ಪ್ರೌಢಶಾಲೆಯ ಶಿಕ್ಷಣವನ್ನು ಪೂರೈಸುವ ವೇಳೆಗೆ ಕನಿಷ್ಠ ಎರಡು ಭಾಷೆಗಳನ್ನು ಸೇರಿಸಿಕೊಳ್ಳಲು ಮುಂದುವರೆಯುತ್ತಾರೆ.

(2) ಎಲ್ಲಾ ಮಕ್ಕಳು ತಮ್ಮ ಮಾತೃ ಭಾಷೆ / ಮನೆಯ ಭಾಷೆಯಲ್ಲಿ ತಮ್ಮ ಶಾಲಾಕಲಿಕೆಯನ್ನು ಪ್ರಾರಂಭಿಸುತ್ತಾರೆ ಮತ್ತು ತಮ್ಮ ಪ್ರೌಢ ಶಾಲಾ ಶಿಕ್ಷಣವನ್ನು ಪೂರೈಸುವ ವೇಳೆಗೆ ಮತ್ತೆ ಕನಿಷ್ಠ ಎರಡು ಭಾಷೆಗಳನ್ನು ಸೇರಿಸಿಕೊಳ್ಳಲು ಮುಂದುವರೆಯುತ್ತಾರೆ.

(3) ಎಲ್ಲಾ ಮಕ್ಕಳೂ ಇಂಗ್ಲಿಷ್ ಮಾಧ್ಯಮದಲ್ಲಿ/ಮನೆ ಭಾಷೆಯಲ್ಲಿ ಶಾಲಾ ಕಲಿಕೆಯನ್ನು ಪ್ರಾರಂಭಿಸುತ್ತಾರೆ. ಅವರು ಪ್ರೌಢ ಶಾಲೆಯ ಶಿಕ್ಷಣವನ್ನು ಪೂರ್ಣಗೊಳಿಸುವ ವೇಳೆಗೆ ಮತ್ತು ಕನಿಷ್ಠ ಎರಡು ಭಾಷೆಗಳನ್ನು ಸೇರಿಸಿಕೊಳ್ಳಲು ಮುಂದುವರೆಯುತ್ತಾರೆ.

(4) ಎಲ್ಲ ಮಕ್ಕಳೂ ತಮ್ಮ ರಾಜ್ಯ ಭಾಷೆಯಲ್ಲಿ ಶಾಲಾ ಕಲಿಕೆಯನ್ನು ಪ್ರಾರಂಭಿಸುತ್ತಾರೆ. ಅವರು ಪ್ರೌಢಶಾಲೆಯ ಶಿಕಣವನ್ನು ಪೂರೈಸುವ ವೇಳೆಗೆ ಮತ್ತು ಕನಿಷ್ಠ ಎರಡು ಭಾಷೆಗಳನ್ನು ಸೇರಿಸಿಕೊಳ್ಳಲು ಮುಂದುವರೆಯುತ್ತಾರೆ.

149. ಈ ಕೆಳಗಿನ ವಿಧಾನಗಳಲ್ಲಿ ಯಾವುದು ಉಚ್ಚಾರದ ಶಿಸ್ತನ್ನೂ (Oral drilling) ಮತ್ತು ಭಾಷೆಯ ಔಪಚಾರಿಕವಾದ ಗುಣಗಳ ಮೇಲೆ ಹಿಡಿತವನ್ನು ಭಾಷಾಕಲಿಕೆಗೆ ಅತೀ ಅವಶ್ಯಕವೆಂದು ಹೇಳುತ್ತದೆ ?

(1) ವ್ಯಾಕರಣ ಭಾಷಾಂತರ ವಿಧಾನ

(2) ಸಂಪೂರ್ಣ ಭೌತಿಕವಾದ ಪ್ರತಿಕ್ರಿಯೆ (Total physical response)

(3) ಕೇಳುವ ಭಾಷಾವಿಜ್ಞಾನ (Audio lingualism)

(4) ಸಂವಹನ ಭಾಷೆಯ ಕಲಿಸುವಿಕೆ

150. ಘೋಷಣಾತ್ಮಕ ಜ್ಞಾನ ಎಂದರೆ :

(1) ವ್ಯಾಕರಣಾತ್ಮಕ ಅಂಶಗಳಲ್ಲಿ ತಪ್ಪನ್ನು ಗುರುತಿಸುವುದು ಹೇಗೆ ಎಂದು ತಿಳಿದುಕೊಳ್ಳುವುದು

(2) ವ್ಯಾಕರಣಾತ್ಮಕ ಅಂಶಗಳನ್ನು ಹೇಗೆ ಕಲಿಸುವುದು ಎಂಬುದನ್ನು ತಿಳಿದುಕೊಳ್ಳುವುದು

(3) ಒಂದು ಭಾಷೆಯಲ್ಲಿ ಪದವನ್ನು ಉಚ್ಚಾರಣೆ ಮಾಡುವುದನ್ನು ತಿಳಿದುಕೊಳ್ಳುವುದು

(4) ವ್ಯಾಕರಣಾತ್ಮಕ ಅಂಶಗಳ ಬಗ್ಗೆ ತಿಳುವಳಿಕೆ

- o O o -

SPACE FOR ROUGH WORK

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬೆಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***